ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 576 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 23/12/2022 |
| ಉತ್ತರಿಸುವ ಸಚಿವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಲಘು-ವ್ಯಾಪಾರಿ ಮಾನ್-ಧನ್ ಯೋಜನೆ (National Pension Scheme for Traders, Shopkeepers and Self-Employed Persons) ಯಾವ ವರ್ಷದಿಂದ ಜಾರಿಗೆ ತರಲಾಗಿದೆ; ಈ ಯೋಜನೆಯ ಮೂಲ ಉದ್ದೇಶ ಮತ್ತು ರೂಪು ರೇಷೆಗಳೇನು; (ಪೂರ್ಣ ಮಾಹಿತಿ ನೀಡುವುದು) | ಕೇಂದ್ರ ಸರ್ಕಾರವು ವ್ಯಾಪಾರಿಗಳು/ಲಘು ವ್ಯಾಪಾರಿಗಳು ಹಾಗೂ ಸ್ವಯಂ ಉದ್ಯೋಗಿಗಳಿಗೆ 60 ವರ್ಷ ಪೂರ್ಣಗೊಂಡ ನಂತರ ಮಾಸಿಕ ನಿಶ್ಚಿತ ರೂ.3000/-ಗಳ ಪಿಂಚಣಿ ಸೌಲಭ್ಯವನ್ನು ಒದಗಿಸುವ, **"ವ್ಯಾಪಾರಿಗಳು ಹಾಗೂ ಸ್ವಯಂ ಉದ್ಯೋಗಿಗಳಿಗೆ ರಾಷ್ಟ್ರೀಯ ಪಿಂಚಣಿ ಯೋಜನೆ (National Pension Scheme for Traders and Self-Employed Persons)"** ಯನ್ನು 2019ನೇ ಸಾಲಿನಲ್ಲಿ ಜಾರಿಗೆ ತಂದಿರುತ್ತದೆ. ಲಘು ವ್ಯಾಪಾರಿಗಳು ಹಾಗೂ ಸ್ವಯಂ ಉದ್ಯೋಗಿಗಳಿಗೆ ಅವರ ವೃದ್ಧಾಪ್ಯದಲ್ಲಿ ಮಾಸಿಕ ಪಿಂಚಣಿ ಒದಗಿಸುವ ಮೂಲಕ ಸಾಮಾಜಿಕ ಹಾಗೂ ಆರ್ಥಿಕ ಭದ್ರತೆ ಒದಗಿಸುವ ಉದ್ದೇಶ ಹೊಂದಲಾಗಿರುತ್ತದೆ. ಸದರಿ ಯೋಜನೆಯ ರೂಪುರೇಷೆಗಳ ವಿವರ ಈ ಕೆಳಕಂಡಂತಿದೆ.<br>➢ ಅರ್ಹ ಫಲಾನುಭವಿಗಳು ಬ್ಯಾಂಕ್ ಖಾತೆ, ಆಧಾರ್ ಕಾರ್ಡ್, ಜಿ.ಎಸ್.ಟಿ.ನೋಂದಣಿ ಸಂಖ್ಯೆ, ವಾರ್ಷಿಕ ವಹಿವಾಟು ವಿವರ ಮತ್ತು ನಾಮನಿರ್ದೇಶಿತರ ವಿವರಗಳೊಂದಿಗೆ ಹತ್ತಿರದ ಸಾಮಾನ್ಯ ಸೇವಾ ಕೇಂದ್ರ (ಸಿ.ಎಸ್.ಸಿ) ಗಳಲ್ಲಿ ಯೋಜನೆಯಡಿ ನೋಂದಾಯಿಸಬಹುದಾಗಿರುತ್ತದೆ.<br>➢ ನೋಂದಾಯಿತ ಫಲಾನುಭವಿಗಳು ಪ್ರಾರಂಭಿಕ ವಂತಿಕೆಯನ್ನು ವಯಸ್ಸಿಗೆ ಅನುಗುಣವಾಗಿ ರೂ.55/-ರಿಂದ ರೂ.200/-ಗಳವರೆಗೆ ನಗದು ರೂಪದಲ್ಲಿ ಪಾವತಿಸಬೇಕಾಗುತ್ತದೆ. ನಂತರದ ಮಾಸಿಕ ವಂತಿಕೆಯನ್ನು ಫಲಾನುಭವಿಗಳ ಬ್ಯಾಂಕ್ ಖಾತೆಯಲ್ಲಿ ಕಟಾವು ಮಾಡಿಕೊಳ್ಳಲಾಗುತ್ತಿದೆ (Auto Debit), ಇದಕ್ಕೆ ಸಮನಾಂತರ ವಂತಿಕೆಯನ್ನು ಕೇಂದ್ರ ಸರ್ಕಾರವು ಪಾವತಿಸುತ್ತದೆ.<br>➢ ನೋಂದಣಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಫಲಾನುಭವಿಗೆ ವ್ಯಾಪಾರಿ ಪಿಂಚಣಿ ಕಾರ್ಡ್ ಅನ್ನು ವಿತರಿಸಲಾಗುತ್ತದೆ. |

| | | |
|---|---|---|
| | | ➢ ನಿರಂತರವಾಗಿ ವಂತಿಕೆಯನ್ನು ಪಾವತಿಸಿದ ಫಲಾನುಭವಿಯು 60 ವರ್ಷ ಪೂರ್ಣಗೊಂಡ ನಂತರ ಮಾಸಿಕ ರೂ.3000/- ಗಳ ನಿಶ್ಚಿತ ಪಿಂಚಣಿಗೆ ಅರ್ಹನಾಗುತ್ತಾನೆ.<br>➢ ಫಲಾನುಭವಿಯು ನಿರಂತರವಾಗಿ ವಂತಿಕೆಯನ್ನು ಪಾವತಿಸಿದ್ದು, ಅವರು 60 ವರ್ಷ ಪೂರ್ಣಗೊಳ್ಳುವ ಒಳಗೆ ಮೃತ ಪಟ್ಟಲ್ಲಿ ಅಥವಾ ಶಾಶ್ವತ ದುರ್ಬಲತೆ ಹೊಂದಿ ವಂತಿಕೆ ಪಾವತಿಸಲು ಸಾಧ್ಯವಾಗದಿದ್ದಲ್ಲಿ, ಅವನ/ಅವಳ ಸಂಗಾತಿಯು ಯೋಜನೆಯನ್ನು ಮುಂದುವರೆಸಬಹುದಾಗಿರುತ್ತದೆ ಅಥವಾ ಯೋಜನೆಯಡಿ ಮುಂದುವರೆಯಲು ಇಚ್ಛಿಸದಿದ್ದಲ್ಲಿ ಸದರಿಯವರು ಪಾವತಿಸಿದ ವಂತಿಕೆ ಮೊತ್ತವನ್ನು ಬಡ್ಡಿಯೊಂದಿಗೆ ಪೂರ್ಣವಾಗಿ ಹಿಂಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ.<br>➢ ಫಲಾನುಭವಿಯು ಯೋಜನೆಯಡಿ ಮುಂದುವರೆಯಲು ಇಚ್ಛಿಸದಿದ್ದಲ್ಲಿ, ಯೋಜನೆಯಿಂದ ನಿರ್ಗಮಿಸಬಹುದಾಗಿರುತ್ತದೆ. ಅಂತಹ, ಸಂದರ್ಭದಲ್ಲಿ ಫಲಾನುಭವಿಯು ಪಾವತಿಸಿದ ವಂತಿಕೆ ಮೊತ್ತವನ್ನು ಬಡ್ಡಿಯೊಂದಿಗೆ ಹಿಂತಿರುಗಿಸಲಾಗುತ್ತದೆ. |
| ಆ) | ರಾಜ್ಯದಲ್ಲಿ ಈ ಯೋಜನೆಯಡಿ ಅರ್ಹ ಫಲಾನುಭವಿಗಳನ್ನು ಗುರುತಿಸಲು ಸಮೀಕ್ಷೆಯನ್ನು ನಡೆಸಲಾಗಿದೆಯೇ; (ಹಾಗಿದ್ದಲ್ಲಿ, ಜಿಲ್ಲಾವಾರು ಮತ್ತು ವರ್ಷವಾರು ಪೂರ್ಣ ವಿವರ ನೀಡುವುದು) | ಈ ಯೋಜನೆಯು ಸಂಪೂರ್ಣವಾಗಿ ಕೇಂದ್ರ ಪುರಸ್ಕೃತ ಯೋಜನೆಯಾಗಿರುವುದರಿಂದ ರಾಜ್ಯ ಸರ್ಕಾರವು ಯಾವುದೇ ರೀತಿಯ ಸಮೀಕ್ಷೆಯನ್ನು ಕೈಗೊಂಡಿರುವುದಿಲ್ಲ. ಆದರೆ, ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯವು 2016-17ನೇ ಸಾಲಿನಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ಭಾರತದಾದ್ಯಂತ 18-40 ವಯೋಮಾನದ ಸುಮಾರು 3 ಕೋಟಿ ಸ್ವಯಂ ಉದ್ಯೋಗಿಗಳು ಇರುವುದಾಗಿ ತಿಳಿಸಿರುತ್ತದೆ. ಕೇಂದ್ರ ಸರ್ಕಾರದ ಸದರಿ ಸಮೀಕ್ಷೆಯ ಜಿಲ್ಲಾವಾರು ಮತ್ತು ವರ್ಷವಾರು ವಿವರ ಲಭ್ಯವಿರುವುದಿಲ್ಲ. |
| ಇ) | ರಾಜ್ಯದಲ್ಲಿ ಈ ಯೋಜನೆಯಡಿ ಫಲಾನುಭವಿಗಳನ್ನು ಯಾವ ಅರ್ಹತೆ/ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತಿದೆ; ಕಳೆದ 3 ವರ್ಷಗಳಲ್ಲಿ ಈ ಯೋಜನೆಯಡಿ ಸಾಧಿಸಲಾಗಿರುವ ಪ್ರಗತಿಯೆಷ್ಟು? (ಜಿಲ್ಲಾವಾರು ಮತ್ತು ವರ್ಷವಾರು ಪೂರ್ಣ ವಿವರ ನೀಡುವುದು) | ಪ್ರಧಾನ ಮಂತ್ರಿ ಲಘು-ವ್ಯಾಪಾರಿ ಮಾನ್-ಧನ್ ಯೋಜನೆ (National Pension Scheme for Traders, Shopkeepers and Self-Employed Persons) ಯಡಿ ನೋಂದಣಿಗೆ ಬೇಕಾಗಿರುವ ಅರ್ಹತೆಗಳು ಈ ಕೆಳಗಿನಂತಿವೆ.<br>**ಫಲಾನುಭವಿಗಳು:** ಅಂಗಡಿ ಮಾಲೀಕರು, ಚಿಲ್ಲರೆ ವ್ಯಾಪಾರಿಗಳು, ಅಕ್ಕಿ ಗಿರಣಿ ಮಾಲೀಕರು, ಎಣ್ಣೆ ಗಿರಣಿ ಮಾಲೀಕರು, ಕಮಿಷನ್ ಏಜೆಂಟ್ಸ್, ಹೋಟೆಲ್ ಮಾಲೀಕರು ಮತ್ತು ಮುಂತಾದ ಲಘು ವ್ಯಾಪಾರಿಗಳು. |

| | | |
|---|---|---|
| | | **ಅರ್ಹತೆ:**<br>➢ 18–40 ವರ್ಷದವರಾಗಿರಬೇಕು.<br>➢ ವಾರ್ಷಿಕ ವಹಿವಾಟು ಗರಿಷ್ಠ ರೂ.1.50 ಕೋಟಿಗಳ ಒಳಗಿರಬೇಕು.<br>➢ ಆದಾಯ ತೆರಿಗೆ ಪಾವತಿದಾರರಾಗಿರಬಾರದು.<br>➢ ಕೇಂದ್ರ ಸರ್ಕಾರದ ಎನ್.ಪಿ.ಎಸ್/ಇ.ಪಿ.ಎಫ್/ ಇ.ಎಸ್.ಐ ಫಲಾನುಭವಿಗಳಾಗಿರಬಾರದು.<br>➢ ಶ್ರಮ್ ಯೋಗಿ ಮಾನ್‌ಧನ್ ಯೋಜನೆ, ಕಿಸಾನ್ ಮಾನ್‌ಧನ್ ಯೋಜನೆಗಳ ಫಲಾನುಭವಿಗಳಾಗಿರಬಾರದು.<br><br>ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯವು ಈ ಯೋಜನೆಯಡಿ ನೋಂದಣಿಗೆ ಸಂಬಂಧಿಸಿದ ಕಾರ್ಯಗಳನ್ನು ಸಾಮಾನ್ಯ ಸೇವಾ ಕೇಂದ್ರ (ಸಿ.ಎಸ್.ಸಿ)ಕ್ಕೆ ವಹಿಸಿರುತ್ತದೆ. ಈವರೆಗೆ ರಾಜ್ಯದಾದ್ಯಂತ 1476 ಫಲಾನುಭವಿಗಳು ಯೋಜನೆಯಡಿ ನೋಂದಣಿಯಾಗಿದ್ದು, ಜಿಲ್ಲಾವಾರು ವಿವರವನ್ನು **ಅನುಬಂಧದಲ್ಲಿ** ಒದಗಿಸಿದೆ. |

**ಕಾಇ 701 ಎಲ್‌ಇಟಿ 2022**

*(ಅರಬೈಲ್ ಶಿವರಾಂ ಹೆಬ್ಬಾರ್)*
*ಕಾರ್ಮಿಕ ಸಚಿವರ*

ಅನುಬಂಧ

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 576ಕ್ಕೆ ಅನುಬಂಧ**

**NPS ಟ್ರೇಡರ್ಸ್ ಅಡಿಯಲ್ಲಿ ಜಿಲ್ಲಾವಾರು ನೋಂದಣಿಯಾಗಿರುವ ವಿವರ**

| ಕ್ರ.ಸಂ. | ಜಿಲ್ಲೆಯ ಹೆಸರು | ನೋಂದಣಿಯಾಗಿರುವ ಸಂಖ್ಯೆ: |
|---|---|---|
| 1. | ಬಾಗಲಕೋಟೆ | 42 |
| 2. | ಬಳ್ಳಾರಿ | 48 |
| 3. | ಬೆಳಗಾವಿ | 127 |
| 4. | ಬೆಂಗಳೂರು ಗ್ರಾಮಾಂತರ | 28 |
| 5. | ಬೆಂಗಳೂರು ನಗರ | 250 |
| 6. | ಬೀದರ | 32 |
| 7. | ಚಾಮರಾಜನಗರ | 47 |
| 8. | ಚಿಕ್ಕಬಳ್ಳಾಪುರ | 32 |
| 9. | ಚಿಕ್ಕಮಗಳೂರು | 26 |
| 10. | ಚಿತ್ರದುರ್ಗ | 25 |
| 11. | ದಕ್ಷಿಣ ಕನ್ನಡ | 68 |
| 12. | ದಾವಣಗೆರೆ | 31 |
| 13. | ಧಾರವಾಡ | 58 |
| 14. | ಗದಗ | 44 |
| 15. | ಹಾಸನ | 36 |
| 16. | ಹಾವೇರಿ | 33 |
| 17. | ಕಲಬುರಗಿ | 28 |
| 18. | ಕೊಡಗು | 03 |
| 19. | ಕೋಲಾರ | 27 |
| 20. | ಕೊಪ್ಪಳ | 35 |
| 21. | ಮಂಡ್ಯ | 45 |
| 22. | ಮೈಸೂರು | 29 |
| 23. | ರಾಯಚೂರು | 28 |
| 24. | ರಾಮನಗರ | 39 |
| 25. | ಶಿವಮೊಗ್ಗ | 33 |
| 26. | ತುಮಕೂರು | 68 |
| 27. | ಉಡುಪಿ | 56 |
| 28. | ಉತ್ತರ ಕನ್ನಡ | 96 |
| 29. | ವಿಜಯಪುರ | 44 |
| 30. | ಯಾದಗಿರಿ | 18 |
| | **ಒಟ್ಟು** | **1476** |